# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : **1391**

ಸದಸ್ಯರ ಹೆಸರು : ಡಾ: ಡಿ.ತಿಮ್ಮಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವವರು : ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು

ಉತ್ತರಿಸಬೇಕಾದ ದಿನಾಂಕ : 30-12-2022.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಇದುವರೆಗೆ ಎಷ್ಟು ದೇವದಾಸಿಯರನ್ನು ಗುರುತಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | 1993-94ರಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ 2007-08ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ನಡೆಸಲಾದ ಸಮೀಕ್ಷೆಯಲ್ಲಿ ರಾಜ್ಯದಲ್ಲಿ ಒಟ್ಟು 46,660 ದೇವದಾಸಿ ಮಹಿಳೆಯರನ್ನು ಗುರುತಿಸಲಾಗಿದೆ. **ಜಿಲ್ಲಾವಾರು ವಿವರವನ್ನು ಅನುಬಂಧ(1) ರಲ್ಲಿ ಲಗತ್ತಿಸಲಾಗಿದೆ.** |
| ಆ | ಈ ದೇವದಾಸಿಯರ ಕಲ್ಯಾಣಕ್ಕಾಗಿ ಸರ್ಕಾರ ಕೈಗೊಂಡ ಕಾರ್ಯಕ್ರಮಗಳಾವುವು; (ವಿವರ ತಿಳಿಸುವುದು) | **ಮಾಜಿ ದೇವದಾಸಿಯರ ಕಲ್ಯಾಣಕ್ಕಾಗಿ ಈ ಕೆಳಕಾಣಿಸಿದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ:-**<br>1. ಮಾಜಿ ದೇವದಾಸಿ ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸಲು ಆದಾಯೋತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಕರ್ನಾಟಕ ರಾಜ್ಯ ಮಹಿಳಾ ಅಬಿವೃದ್ಧಿ ನಿಗಮದ ಮೂಲಕ ರೂ.30,000/-ಗಳ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.<br>2. 45 ವರ್ಷ ಮೇಲ್ಪಟ್ಟ ಮಾಜಿ ದೇವದಾಸಿಯರಿಗೆ ಮಾಸಿಕ ರೂ.1500/-ಗಳ ಮಾಸಾಶನವನ್ನು ನೀಡಲಾಗುತ್ತಿದೆ. (2022-23ನೇ ಸಾಲಿನಿಂದ ಮಾಸಾಶನ ಯೋಜನೆಯು ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯಕ್ಕೆ ವರ್ಗಾವಣೆಯಾಗಿರುತ್ತದೆ.)<br>3. ನಿವೇಶನ ಹೊಂದಿರುವ ವಸತಿ ರಹಿತ ಮಾಜಿ ದೇವದಾಸಿಯರಿಗೆ ರಾಜೀವ್‌ಗಾಂಧಿ ವಸತಿ ಅಭಿವೃದ್ಧಿ ನಿಗಮ ನಿಯಮಿತದ ಮೂಲಕ ವಸತಿ ಸೌಲಭ್ಯ ಕಲ್ಪಿಸಲಾಗುತ್ತಿದೆ.<br>4. ದೇವದಾಸಿ ಪದ್ದತಿ ನಿರ್ಮೂಲನೆಗಾಗಿ ಮತ್ತು ಆಚರಣೆ ವಿರುದ್ಧ ಜಾರಿಯಲ್ಲಿರುವ ದೇವದಾಸಿ ಸಮರ್ಪಣಾ ನಿಷೇಧ ಕಾಯ್ದೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಬೀದಿ ನಾಟಕ, ಗೋಡೆ ಬರಹ, ಕರಪತ್ರ ಹಂಚುವುದರ ಮೂಲಕ ವ್ಯಾಪಕ ಪ್ರಚಾರವನ್ನು ನೀಡಲಾಗುತ್ತಿದೆ.<br>5. ಜಿಲ್ಲಾಡಳಿತ ಮತ್ತು ಪೋಲಿಸ್ ಇಲಾಖೆ ಸಹಯೋಗ ದೊಂದಿಗೆ ಜಾತ್ರೆ ಸಮಯದಲ್ಲಿ ದೇವದಾಸಿ ಪದ್ದತಿ ಆಚರಣೆ ಮಾಡದಂತೆ, ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.<br>6. ಮಾಜಿ ದೇವದಾಸಿ ಮಹಿಳೆಯರಿಗೆ ಆರೋಗ್ಯ ತಪಾಸಣಾ ಶಿಬಿರಗಳು ಹಾಗೂ ಕಾನೂನು ಅರಿವು ಶಿಬಿರಗಳನ್ನು ಆಯೋಜಿಸಲಾಗುತ್ತಿದೆ. |

<table>
<tr>
<td></td>
<td></td>
<td>ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾವತಿಯಿಂದ ದೇವದಾಸಿಯರ ಮಕ್ಕಳ ವಿವಾಹ ಕಾರ್ಯಕ್ರಮಕ್ಕೆ ಈ ಕೆಳಕಂಡಂತೆ ಪ್ರೋತ್ಸಾಹಧನ ನೀಡಲಾಗುತ್ತಿದೆ.<br>1. ಪರಿಶಿಷ್ಟ ಪಂಗಡದ ದೇವದಾಸಿಯರ ಗಂಡು ಮಕ್ಕಳು ಸ್ವಜಾತಿ /ಇತರೆ ಜಾತಿಯ ಹುಡುಗಿಯನ್ನು ವಿವಾಹವಾದಲ್ಲಿ ರೂ.3.00 ಲಕ್ಷಗಳನ್ನು ನೀಡಲಾಗುತ್ತದೆ.<br>2. ಪರಿಶಿಷ್ಟ ಪಂಗಡದ ದೇವದಾಸಿಯರ ಹೆಣ್ಣು ಮಕ್ಕಳು ಸ್ವಜಾತಿ /ಇತರೆ ಜಾತಿಯ ಹುಡುಗನನ್ನು ವಿವಾಹವಾದಲ್ಲಿ ರೂ 5.00 ಲಕ್ಷಗಳನ್ನು ನೀಡಲಾಗುತ್ತದೆ</td>
</tr>
<tr>
<td>ಇ</td>
<td>ಎಷ್ಟು ದೇವದಾಸಿಯರಿಗೆ ಪುನರ್‌ವಸತಿ ಕಲ್ಪಿಸಲಾಗಿದೆ ಹಾಗೂ ಇನ್ನೂ ಎಷ್ಟು ಜನರಿಗೆ ಕಲ್ಪಿಸಬೇಕಾಗಿದೆ; (ವಿವರ ನೀಡುವುದು)</td>
<td>ಮಾಜಿ ದೇವದಾಸಿ ಮಹಿಳೆಯರಿಗೆ ಪುನರ್‌ವಸತಿ ಕಲ್ಪಿಸಲಾದ ವಿವರಗಳು
<table>
<tr><th>ಕ್ರ ಸಂ</th><th>ಯೋಜನೆಗಳು</th><th>ಪುನರ್‌ವಸತಿ ಕಲ್ಪಿಸಲಾದ ವಿವರಗಳು</th></tr>
<tr><td>1</td><td>ಮಾಜಿ ದೇವದಾಸಿ ಮಹಿಳೆ ಯರಿಗೆ ಆದಾಯೋತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಇದುವರೆಗೂ ಪ್ರೋತ್ಸಾಹಧನ ಸೌಲಭ್ಯವನ್ನು ಪಡೆದವರು</td><td>29,580</td></tr>
<tr><td>2</td><td>ಪ್ರಸ್ತುತ ಮಾಸಾಶನ ಪಡೆಯುತ್ತಿರುವ 45 ವರ್ಷ ಮೇಲ್ಪಟ್ಟ ಮಾಜಿ ದೇವದಾಸಿ ಮಹಿಳೆಯರು</td><td>26,207</td></tr>
<tr><td>3</td><td>ರಾಜೀವ್‌ಗಾಂಧಿ ವಸತಿ ನಿಗಮ ಮೂಲಕ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಮತ್ತು ಇತರೆ ಇಲಾಖೆಗಳಿಂದ ಇದುವರೆಗೂ ವಸತಿ ಸೌಲಭ್ಯವನ್ನು ಪಡೆದವರು.</td><td>20,540</td></tr>
</table>
ಇನ್ನುಳಿದ ಮಾಜಿ ದೇವದಾಸಿ ಮಹಿಳೆಯರಿಗೆ ಮುಂದಿನ ಆರ್ಥಿಕ ಸಾಲುಗಳಲ್ಲಿ ಸರ್ಕಾರ ಒದಗಿಸುವ ಅನುದಾನದಿಂದ ಪುನರ್ವಸತಿ ಕಲ್ಪಿಸಲಾಗುವುದು.</td>
</tr>
<tr>
<td>ಈ</td>
<td>ದೇವದಾಸಿಯರ ಕಲ್ಯಾಣಕ್ಕಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಮೀಸಲಿಟ್ಟ ಅನುದಾನ ಎಷ್ಟು; ಇದರಲ್ಲಿ ಖರ್ಚಾಗಿರುವ ಅನುದಾನವೆಷ್ಟು; (ಕಳೆದ 4 ವರ್ಷಗಳ ಮಾಹಿತಿ ನೀಡುವುದು)</td>
<td>ದೇವದಾಸಿಯರ ಕಲ್ಯಾಣಕ್ಕಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಮೀಸಲಿಟ್ಟ ಅನುದಾನದ ಮಾಹಿತಿಯನ್ನು ಅನುಬಂಧ (2)ರಲ್ಲಿ ಲಗತ್ತಿಸಿದೆ.</td>
</tr>
</table>

ಮಮಇ/123/ಮಅನಿ/2022

Halappa BA

**(ಆಚಾರ್ ಹಾಲಪ್ಪ ಬಸಪ್ಪ)**
ಮಾನ್ಯ ಗಣಿ ಮತ್ತು ಭೂವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ ಹಾಗೂ ಹಿರಿಯ
ನಾಗರೀಕರ ಸಬಲೀಕರಣ ಸಚಿವರು.

# Karnataka Legislative Council

Starred Question Number : 1391
Name of the member : Dr. D.Thimmaiah (Local Bodies Constituency)
To be Replied by : Hon'ble minister for Mines and Geology, Women and Child Development, Empowerment of Differently Abled and Senior Citizens.
Date of Reply : 30-12-2022

| Sl.No. | Question | Answer |
|---|---|---|
| A | How many Devadasis have been identified in the state so far; (Provide District wise details) | A total of 46,660 Devadasi women are identified in the state, through survey conducted by the Department of Women and Child Development in 1993-94 and Karnataka State Women's Development Corporation in 2007-08. District wise details are given in Annexure (1) |
| B | Which are the programmes undertaken by the government for the welfare of these Devadasis; (give details) | The following programs are being implemented for the welfare of ex-devadasi women:-<br><br>1) An incentive of Rs.30,000/- is being provided by the Karnataka State Women's Development Corporation to encourage ex-Devadasi women, to take up income generating activities for their economic empowerment<br><br>2) Ex-devadasi women who are above 45 years of age are being given a monthly pension of Rs.1500/-. (Since 2022-23, the pension scheme is transferred to the Directorate of Social Security and Pensions.)<br><br>3) Housing facility is being provided through Rajiv Gandhi Housing Development Corporation Limited, to ex- Devadasi women who own site.<br><br>4) Wide publicity is being given to create awareness among the people about the Devadasi Dedication Prohibition Act which is in force, for abolition of Devadasi system and to prevent the practice, through street plays, writing slogans on walls, distribution of pamphlets. etc.<br><br>5) In collaboration with the District Administration and Police Department, awareness is being created among the people not to practice Devadasi system during the fairs/ jatras.<br><br>6) Health check-up camps and legal awareness camps are being organized for ex-devadasi women.<br><br>The Scheduled Tribes Welfare Department provides the following incentives for the marriage programme for children of Devadasis. |

<table>
<tr><td></td><td></td><td>1. The Sons of Scheduled Tribe Devadasis married to a girl of same caste / other caste will be provide of Rs 3.00 lakhs<br>2. The Daughters of Scheduled Tribe Devadasis married to a boy of same caste/ other caste will be provide of Rs. 5.00 lakhs</td></tr>
<tr><td>C</td><td>How many Devadasi women have been rehabilitated and how many more needs rehabilitation; (give details)</td><td>Details of rehabilitation to ex- devadasi women is as follows:
<table>
<tr><th>Sl.no</th><th>Programs</th><th>Number of ex-devadasi women</th></tr>
<tr><td>1</td><td>Ex-devadasi women who have so far received incentives to engage in income generating activities</td><td>29580</td></tr>
<tr><td>2</td><td>Ex- Devadasi women above 45 years of age currently receiving pension</td><td>26207</td></tr>
<tr><td>3</td><td>Ex- Devadasi women who have received housing facility untill now, from Karnataka State Women Development Corporation and other departments through Rajiv Gandhi Housing Corporation Ltd.</td><td>20540</td></tr>
</table>
The rest of the ex-devadasi women will be rehabilitated in the coming financial years, as per the budget provided by the government.</td></tr>
<tr><td>D</td><td>What is the amount of budget earmarked for the implementation of the programs undertaken for the welfare of ex- Devadasi women; what is the expenditure in this; (Provide information for last 4 years)</td><td>Information is furnished in Annexure 2</td></tr>
</table>

No: WCD/123/WDC/2022

Halappa BA

**(ACHAR HALAPPA BASAPPA)**
Hon'ble Minister for Mines and Geology,
Women and Child Development, Empowerment
of Differently Abled and Senior Citizens.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ. 1391ಕ್ಕೆ ಅನುಬಂಧ

# ಅನುಬಂಧ -1

| ಕ್ರ. ಸಂ | ಜಿಲ್ಲೆಯ ಹೆಸರು | ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟ ಮಾಜಿ ದೇವದಾಸಿ ಮಹಿಳೆಯರ ಸಂಖ್ಯೆ |
|---|---|---|
| 1 | ಬೆಳಗಾವಿ | 4,724 |
| 2 | ವಿಜಯಪುರ | 4,103 |
| 3 | ಬಾಗಲಕೋಟೆ | 7,827 |
| 4 | ಬಳ್ಳಾರಿ | 10,715 |
| 5 | ಕೊಪ್ಪಳ | 6,035 |
| 6 | ರಾಯಚೂರು | 3,949 |
| 7 | ಕಲಬುರಗಿ | 1,445 |
| 8 | ಧಾರವಾಡ | 763 |
| 9 | ಹಾವೇರಿ | 990 |
| 10 | ಗದಗ | 2,900 |
| 11 | ದಾವಣಗೆರೆ | 1,610 |
| 12 | ಚಿತ್ರದುರ್ಗ | 406 |
| 13 | ಶಿವಮೊಗ್ಗ | 24 |
| 14 | ಯಾದಗಿರಿ | 1,169 |
| ಒಟ್ಟು | | **46,660** |

# ಅನುಬಂಧ-2

## ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

(ರೂ.ಲಕ್ಷಗಳಲ್ಲಿ)

| ಕ್ರ ಸಂ. | ಯೋಜನೆ | ವರ್ಷ | | | | | | | |
|---|---|---|---|---|---|---|---|---|---|
| | | 2018-19 | | 2019-20 | | 2020-21 | | 2021-22 | |
| | | ಒದಗಿಸಿದ ಅನುದಾನ | ಖರ್ಚಾದ ಅನುದಾನ | ಒದಗಿಸಿದ ಅನುದಾನ | ಖರ್ಚಾದ ಅನುದಾನ | ಒದಗಿಸಿದ ಅನುದಾನ | ಖರ್ಚಾದ ಅನುದಾನ | ಒದಗಿಸಿದ ಅನುದಾನ | ಖರ್ಚಾದ ಅನುದಾನ |
| 1 | ಮಾಸಾಶನ | 4772.00 | 4772.00 | 5452.00 | 5350.00 | 5423.00 | 5277.78 | 5436.00 | 4854.00 |
| 2 | ವಸತಿ | 1188.75 | 1188.75 | 1417.00 | 1417.00 | 100.00 (SCSP/ unspent) | 100.00 | 567.32 (SCSP/ unspent) | 567.32 |
| 3 | ದೇವದಾಸಿ ಪುನರ್ವಸತಿ ಯೋಜನೆಗೆ | 700.00 | 700.00 | 830.00 | 830.00 | 614.00 | 614.00 | 335.00 | 316.50 |

## ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾವತಿಯಿಂದ ಸರಳ ವಿವಾಹ, ಅಂತರ್‌ಜಾತಿ ವಿವಾಹ, ಒಳ ಪಂಗಡ ವಿವಾಹ, ವಿಧವಾ ಮರು ವಿವಾಹ ಮತ್ತು ದೇವದಾಸಿಯರ ಮಕ್ಕಳ ವಿವಾಹ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು, 2022-23ನೇ ಸಾಲಿನಲ್ಲಿ ವಿವಾಹ ಕಾರ್ಯಕ್ರಮಕ್ಕೆ ರೂ.1024.38 ಲಕ್ಷಗಳನ್ನು ನಿಗದಿಪಡಿಸಿಕೊಳ್ಳಲಾಗಿರುತ್ತದೆ.

ದೇವದಾಸಿ ವಿವಾಹ ಕಾರ್ಯಕ್ರಮದಡಿ ಬಂದಂತಹ ಅರ್ಜಿಗಳಿಗೆ ನಿಯಮಾನುಸಾರ ಪರಿಶೀಲಿಸಿ, ಅನುದಾನ ಲಭ್ಯತೆಗೆ ಅನುಗುಣವಾಗಿ ಅನುದಾನವನ್ನು ಪ್ರಸ್ತಾವನೆ ಬಂದ ಜಿಲ್ಲೆಗಳಿಗೆ ಬಿಡುಗಡ ಮಾಡಲಾಗುವುದು. ಕಳೆದ 4 ವರ್ಷಗಳಿಂದ ಬಿಡುಗಡೆ ಮಾಡಿದ ಅನುದಾನ ಮತ್ತು ಫಲಾನುಭವಿಗಳ ಸಂಖ್ಯೆ ಈ ಕೆಳಕಂಡಂತಿದೆ.

| ಕ್ರ. ಸಂ | ವರ್ಷ | ಬಿಡುಗಡೆ ಮಾಡಿದ ಮೊತ್ತ (ರೂ. ಲಕ್ಷಗಳಲ್ಲಿ) | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | 2018-19 | 0.00 | 0 |
| 2 | 2019-20 | 47.00 | 13 |
| 3 | 2020-21 | 8.00 | 2 |
| 4 | 2021-22 | 169.00 | 44 |